C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 102/2022

**ಚಾ.ಸಾ.–06 ಪ್ರಾ.ಸಾ.–06**

| | |
|---|---|
| **ಸಾಕ್ಷಿದಾರರ ಹೆಸರು** | **ಶಿವರಾಜು** |
| **ತಂದೆಯ ಹೆಸರು** | **ದಾಸಯ್ಯ** |
| **ವಯಸ್ಸು** | **39 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ಶಂಭೂನಹಳ್ಳಿ ಗ್ರಾಮ,<br>ಪಾಂಡವಪುರ ತಾಲ್ಲೂಕು** |

**ದಿನಾಂಕಃ 01.04.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 1 ರಿಂದ 5 ರವರ ಪರಿಚಯ ನನಗೆ ಇದೆ. ನಾವು ಮಾದಿಗ ಜಾತಿಗೆ ಸೇರಿದವರು. ಅವರು ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ಚಾಸಾ- 7, 8, 9 ರವರು ನನಗೆ ಗೊತ್ತಿರುವುದಿಲ್ಲ, ಚಾಸಾ- 10 ರವರು ನನಗೆ ಗೊತ್ತು.

2. ಈ ದಿನ ನ್ಯಾಯಾಲಯದ ಮುಂದಿರುವ 1ನೇ ನೇ ಆರೋಪಿಯ ಪರಿಚಯ ನನಗೆ ಇದೆ. (Witness identified accused No. 1 in the dock). 2 ರಿಂದ 5 ನೇ ಆರೋಪಿ ರವರ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No. 2, 4 and 5). ಅವರು ಒಕ್ಕಲಿಗ ಜಾತಿಗೆ ಸೇರಿದವರು.

3. ದಿಃ25.01.2022 ರಂದು ಬೆಳಿಗ್ಗೆ 7.00 ಗಂಟೆಗೆ ನಾವು 16 ಜನ ಕಾಂಕ್ರೀಟ್ ಕೆಲಸಕ್ಕೆಂದು ದೇವೆಗೌಡನಕೊಪ್ಪಲಿಗೆ ಆರೋಪಿತರ ಮನೆಗೆ ಹೋಗಿದ್ದೆವು. ಅಲ್ಲಿಗೆ ನನ್ನನ್ನು ಚಾಸಾ- 1 ರವರು ಕಾಂಕ್ರೀಟ್ ಕೆಲಸಕ್ಕೆಂದು ಕರೆದುಕೊಂಡು ಹೋಗಿರುತ್ತಾರೆ.

ನಾವು 16 ಜನರು ಹೋಗಿರುತ್ತೇವೆ ಅವರಲ್ಲಿ ಸ್ವಲ್ಪ ಜನರು ನನಗೆ ಗೊತ್ತಿರುವವರು ಚಾಸಾ- 10 ಬಸವರಾಜು, ಚಾಸಾ- 4 ನಂಜಪ್ಪ, ನವೀನ, ಚಾಸಾ- 3 ಪ್ರೇಮ, ಉಳಿದವರ ಹೆಸರು ನನಗೆ ಗೊತ್ತಿಲ್ಲ. ಕೈಯಿಂದ ಕಾಂಕ್ರೀಟ್ ಕಲೆಸಿ ಆರ್.ಸಿ.ಸಿ ಕೆಲಸವನ್ನು ಮಾಡಿ ಸಂಜೆ 5.00 ಗಂಟೆಗೆ ಕೆಲಸ ಮುಗಿಸಿದೆವು. ಚಾಸಾ- 3 ಮತ್ತು 4 ರವರು ಕೆಲಸ ಮಾಡಿದ ಕೂಲಿಯನ್ನು ಮನೆಯ ಮಾಲೀಕರನ್ನು ಕೇಳಿದರು. ಸದರಿ ಮಾಲೀಕರು ಗಂಡಸು ಆಗಿದ್ದರು. ಮನೆಯ ಮಾಲೀಕರಿಗೂ ಮತ್ತು ಚಾಸಾ- 3 ಮತ್ತು 4 ರವರ ಮದ್ಯೆ ಮಾತುಕತೆಯಾಯಿತು. ಉಳಿದ ನಾವೆಲ್ಲರೂ ನೋಡುತ್ತಿದ್ದ ಹಾಗೆಯೇ ಚಾಸಾ- 4 ರವರಿಗೆ ಏಟು ಬೀಳುತ್ತಿತ್ತು. ಚಾಸಾ- 4 ರವರಿಗೆ 1ನೇ ಆರೋಪಿ ಹೊಡೆಯುತ್ತಿದ್ದರು. ನಾವು 4 – 5 ಜನ, ಅವರ ಹೆಸರು ನನಗೆ ಗೊತ್ತಿಲ್ಲ ಬಿಡಿಸಲು ಹೋದೆವು. ಆಗ ಅಲ್ಲಿ ಬಹಳಷ್ಟು ಜನರು ಇದ್ದರು. ಜನರೆಲ್ಲರೂ ಸೇರಿ ಒಟ್ಟಿಗೆ ನನಗೆ, ಚಾಸಾ- 3, 4 ರವರಿಗೆ ದೊಣ್ಣೆಯಿಂದ ಹೊಡೆದರು. ನಂತರ ಯಾರೋ ಅಲ್ಲಿಗೆ ಪೋಲೀಸರನ್ನು ಕರೆಸಿದರು. ನಂತರ ನಾನು, ಚಾಸಾ- 1 ಮಲ್ಲಿಕಾ, ಚಾಸಾ- 3 ಪ್ರೇಮ ಮತ್ತು ಇನ್ನೊಬ್ಬರು ಸೇರಿ ನಾವು 4 ಜನ ಪಾಂಡವಪುರದ ಸರ್ಕಾರಿ ಆಸ್ಪತ್ರೆಗೆ ಹೊದೆವು. ಪೋಲೀಸರಿಗೆ ದೂರು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ಆರೋಪಿತರು ನಮಗೆ ಹಲ್ಲೆ ಮಾಡಿದ ದೊಣ್ಣೆಯನ್ನು ಗುರುತಿಸಬಲ್ಲೆ. ಅವುಗಳನ್ನು ಈಗ ನೋಡುತ್ತಿದ್ದು ಈಗಾಗಲೇ ಎಂಒ–2 ಮತ್ತು 3 ಎಂದು ಗುರುತಿಸಲಾಗಿದೆ. ಈ ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ಪೋಲೀಸರಿಗೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್.ವಿ ವಕೀಲರಿಂದ:**

5. ಚಾಸಾ- 1 ರಿಂದ 4 ರವರು ಅಣ್ಣತಮ್ಮಂದಿರು. ಅವರು ನನ್ನ ಸಂಬಂದಿಕರಲ್ಲ. ದಿಃ25.01.2022 ರ ಪೂರ್ವದ ದಿನಗಳಲ್ಲಿ ನಾವು ಆರೋಪಿತರ ಮನೆಗೆ ಗಾರೆ ಕೆಲಸಕ್ಕೆ ಹೋಗಿರುವುದಿಲ್ಲ. ಅಲ್ಲಿಯವರೆಗೂ ಮನೆಯ ಮಾಲೀಕರ ಪರಿಚಯ ನನಗೆ ಇರಲಿಲ್ಲ, ಅವರಿಗೂ ನನ್ನ ಪರಿಚಯ ಇರಲಿಲ್ಲ. ಮನೆಯ ಮಾಲೀಕರು ಬಾಬು ಎನ್ನುವ ಮೇಸ್ತ್ರಿಗೆ ಮನೆ ಕಟ್ಟುವ ಉಸ್ತುವಾರಿ ವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಚದರಕ್ಕೆ ಇಷ್ಟು ಎಂದು ಮನೆಯ ಮಾಲೀಕರು ಮೇಸ್ತ್ರಿಯ ಬಳಿ ಮಾತುಕತೆ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಮನೆಯ ಮಾಲೀಕರು ನನ್ನ ಬಳಿಯಾಗಲೀ ಚಾಸಾ- 1 ರವರ ಬಳಿಯಾಗಲೀ ದಿನಗೂಲಿಯ ಬಗ್ಗೆ ಮಾತುಕತೆ

ಮಾಡಿರುವುದಿಲ್ಲ. ದಿಃ25.01.2022 ರಂದು ಕೆಲಸಕ್ಕೆ ಮನೆಯ ಮಾಲೀಕರು ನನ್ನನ್ನು ಕರೆದಿರುವುದಿಲ್ಲ ಎಂದರೆ ಸರಿ. ಕೆಲಸ ಮುಗಿಸಿದ ನಂತರ ಮನೆಯ ಮಾಲೀಕರು ಮಾಂಸಾಹಾರದ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ಕೆಲಸ ಮುಗಿಸಿ ನಾವು ಊಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಮದ್ಯಪಾನ ಮಾಡಿ ನಾವೆಲ್ಲರೂ ಊಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

6. ಕಾಂಕ್ರೀಟ್ ಕೆಲಸ ಮುಗಿಸಿದ ನಂತರ ಬಾಬು ಮೇಸ್ತ್ರಿಯ ಬಳಿ ಈಗಾಗಲೇ ಕಾಂಕ್ರೀಟ್ ಕೆಲಸದ ಹಣ ನೀಡಿರುತ್ತೇವೆ ಅವರಿಂದ ಹಣ ಪಡೆದುಕೊಳ್ಳಿ ಎಂದು ಮನೆಯ ಮಾಲೀಕರು ನಮಗೆ ತಿಳಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ಸಮಯ ನಾವೆಲ್ಲರೂ ನೀವೆ ಹಣ ಕೊಡಿ ಎಂದು ಮನೆಯ ಮಾಲೀಕರಿಗೆ ಒತ್ತಡ ಹಾಕಿರುತ್ತೇವೆ ಎಂದರೆ ಸರಿ. ಮದ್ಯಪಾನ ಮಾಡಿದ ಕೆಲಸಗಾರರೆಲ್ಲರೂ ಸೇರಿ ಆಗ ತಾನೇ ಆರ್.ಸಿ.ಸಿ ಕೆಲಸ ಮುಗಿಸಿದ್ದ ಕಾಂಕ್ರೀಟನ್ನು ಕಿತ್ತು ಹಾಕುತ್ತೇವೆ ಎಂದು ಆರೆ ಗುದ್ದಲಿ ತೆಗೆದುಕೊಂಡು ಅದನ್ನು ಹೊಡೆದುಹಾಕಲು ಪ್ರಯತ್ನಿಸಿದರು ಎಂದು ನನಗೆ ಗೊತ್ತಿಲ್ಲ.

7. ಮನೆಯ ಕೆಲಸ ಮುಗಿಸಿದ ನಂತರ ನಾನು ಮುಖ ತೊಳೆಯಲು ಹೋಗಿರುತ್ತೇನೆ ಎಂದರೆ ಸರಿ. ಆದಕಾರಣ ಮನೆಯ ಮಾಲೀಕರಿಗೂ ಇತರ ಕೆಲಸಗಾರರಿಗೂ ಮದ್ಯೆ ಏನು ಮಾತುಕತೆಯಾಗಿರುತ್ತದೆ ಎಂದು ನಾನು ಕೇಳಿಸಿಕೊಂಡಿರುವುದಿಲ್ಲ. ಚಾಸಾ- 1 ರವರು ಮತ್ತು ಇತರ ಕೆಲಸಗಾರರು ಮನೆಯ ಮಾಲೀಕರ ಬಳಿ ಕೂಲಿ ಕೇಳಿದಾಗ ಬಾಬು ಮೇಸ್ತ್ರಿ ರವರ ಬಳಿ ಪಡೆದುಕೊಳ್ಳಿ ಎಂದು ಮನೆಯ ಮಾಲೀಕರು ಹೇಳಿರುತ್ತಾರೆ ಹೊರತು ಅಲ್ಲಿ ಬೇರೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯ ಮಾಲೀಕರ ಹೆಸರಾಗಲೀ ಕುಟುಂಬದವರ ಹೆಸರಾಗಲೀ ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಸಮಯ ಅಲ್ಲಿ ನಾವು ಕೆಲಸಗಾರರನ್ನು ಬಿಟ್ಟು ಸುಮಾರು 20 – 25 ಜನ ಸೇರಿದ್ದರು. ಸದರಿ ವ್ಯಕ್ತಿಗಳು ಯಾರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ.

8. ಸ್ಥಳಕ್ಕೆ ಮೊದಲು ಬೈಕಿನಲ್ಲಿ ಇಬ್ಬರು ಪೋಲೀಸರು ಬಂದರು ನಂತರ ಜೀಪಿನಲ್ಲಿ ಸುಮಾರು 3 ಜನ ಪೋಲೀಸರು ಬಂದರು.

9. ನಾವೆಲ್ಲರೂ ನೋಡುತ್ತಿದ್ದ ಹಾಗೆಯೇ ಚಾಸಾ- 4 ರವರಿಗೆ ಏಟು ಬೀಳುತ್ತಿತ್ತು, ಚಾಸಾ- 4 ರವರಿಗೆ 1ನೇ ಆರೋಪಿ ಹೊಡೆಯುತ್ತಿದ್ದರು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು 4 – 5 ಜನ ಬಿಡಿಸಲು

ಹೋದೆವು, ಆಗ ಜನರೆಲ್ಲರೂ ಸೇರಿ ಒಟ್ಟಿಗೆ ನನಗೆ, ಚಾಸಾ- 3, 4 ರವರಿಗೆ ದೊಣ್ಣೆಯಿಂದ ಹೊಡೆದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಪೋಲೀಸರು ಬಂದರು, ನಾವು ಆಸ್ಪತ್ರೆಗೆ ಹೋದ ನಂತರ ಅವರು ಅಲ್ಲಿಗೆ ಬಂದರು. ಆಸ್ಪತ್ರೆಯಲ್ಲಿ ನಾವು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**10.** ಎಂಒ–2, 3 ದೊಣ್ಣೆಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಎಂಒ–2 ಮತ್ತು 3ದೊಣ್ಣೆಗಳನ್ನು ಹಲ್ಲೆಗೆ ಉಪಯೋಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**11.** ಪೋಲೀಸರ ಮುಂದೆ ನಾನು ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ದಿಃ25.01.2022 ರಂದು ರಾತ್ರಿ ಹೇಳಿಕೆ ನೀಡಿರುತ್ತೇನೆ ಅದಲ್ಲದೆ ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**12.** ಚಾಸಾ- 1 ಮತ್ತು ಅವರ ಅಣ್ಣತಮ್ಮಂದಿರಿಗೆ ಸಹಾಯ ಮಾಡುವ ಸಲುವಾಗಿ ಚಾಸಾ- 1 ರವರು ನೀಡಿದ ಸುಳ್ಳು ದೂರಿಗೆ ಅವರಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಾಬ್ತು ನಾನು ಪೋಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**13.** **ಮರು ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**